ಶ್ರೀಃ

॥ ಜ್ಞಾನಾದೇವ ತು ಕೈವಲ್ಯಮ್ ॥

# ‘ನಾನು’

## ಒಂದು ಪರಿಚಯ



ಲೇಖಕರು : ವಿದ್ವಾನ್ ಅನಂತಶರ್ಮಾ ಭುವನಗಿರಿ

**ವೇದಾಂತಭಾರತೀ**

**(ವೇದ-ವೇದಾಂತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ)**
**ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ-571 602**
**ಮೈಸೂರು ಜಿಲ್ಲೆ. ದೂ : 08223-262471**

**Nanu-** Ondu Parichaya

FIRST PRINT : 2010
COPIES : 50,000

© : *Vedanta Bharati*

PAGES : 32

PRICE : ₹. 3.00

PUBLISHED BY :
**Vedanta Bharati**
(Academy of Veda - Vedanta Studies and Research)
Chandramouli Road, Krishnarajanagara - 571 602,
Mysore District. ✆ : 08223-264371, 262471

**PRINTED AT :**
Span Print
Banashankari, Bangalore- 70

श्री श्री जगद्गुरु शङ्कराचार्य महासंस्थानम्
दक्षिणाम्नाय श्री शारदापीठम्, शृङ्गेरी.
Sri Sri Jagadguru Shankaracharya Mahasamstanam
Dakshinamnaya Sri Sharada Peetham, Sringeri- 577 139

Camp : SRINGERI
Ref : 5/8/4843
Date : 6/10/2010

ಶ್ರೀಮಚ್ಛಂಕರಭಗವತ್ಪಾದಾಚಾರ್ಯರು ಪ್ರಸ್ಥಾನತ್ರಯ ಭಾಷ್ಯಗಳನ್ನು ರಚಿಸಿ ಅಲ್ಲಿ ಹೇಳಿರುವ ಆತ್ಮತತ್ತ್ವವನ್ನು ಸಾಮಾನ್ಯ ಜನರಿಗೂ ಅರ್ಥವಾಗುವಂತೆ ತಿಳಿಸಲು ಸಣ್ಣ ಸಣ್ಣ ಪ್ರಕರಣಗಳನ್ನು ರಚಿಸಿದರು. ಅವುಗಳಲ್ಲಿ ದಶಶ್ಲೋಕೀ, ನಿರ್ವಾಣಷಟ್ಕ ಎಂಬ ಪ್ರಕರಣಗಳು ಅತಿ ರಮಣೀಯವಾಗಿವೆ. ಅವುಗಳನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಆತ್ಮಸ್ವರೂಪಜ್ಞಾನವು ಗುರುಕೃಪೆಯಿಂದ ಸುಲಭವಾಗುತ್ತದೆ.

ವೇದಾಂತಭಾರತಿಯು ಈ ಎರಡನ್ನು ಗುರ್ವಷ್ಟಕದೊಂದಿಗೆ ಸುಲಭ ಶೈಲಿಯ ಕನ್ನಡ ಅನುವಾದ ಮಾಡಿಸಿ "**ನಾನು**– ಒಂದು ಪರಿಚಯ" ಎಂಬ ಶೀರ್ಷಿಕೆಯ ಅಡಿಯಲ್ಲಿ ಪ್ರಕಾಶ–ಪಡಿಸುತ್ತಿರುವುದು ಶ್ಲಾಘನೀಯವಾಗಿದೆ. ತತ್ತ್ವ–ಜಿಜ್ಞಾಸುಗಳಿಗೆ ಇದು ಅತ್ಯಂತೋಪಾದೇಯವಾಗಿದೆ.

ಶ್ರೀ ಶಾರದಾಚಂದ್ರಮೌಳೀಶ್ವರರ ಕೃಪೆಯಿಂದ ಈ ಗ್ರಂಥವು ವಿಶೇಷ ಪ್ರಚಾರಪಡೆಯಲಿ ಎಂದು ಶ್ರೀಶ್ರೀ ಜಗದ್ಗುರು ಮಹಾಸ್ವಾಮಿಗಳವರು ಆಶೀರ್ವದಿಸಿರುತ್ತಾರೆ.

ಇಂತು

॥ ಶ್ರೀ ಚತುರ್ಭುಜ ಪಟ್ಟಾಭಿರಾಮೋ ವಿಜಯತೇ ॥





**ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠ**


ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ–571 602 ಮೈಸೂರು ಜಿಲ್ಲೆ

ಮೊಕ್ಕಾಂ : ಬೆಂಗಳೂರು

**ಶ್ರೀ ಶಂಕರಭಗವತ್ಪಾದರ** ಭಾಷ್ಯಗ್ರಂಥಗಳಲ್ಲಿ ಪ್ರತಿಪಾದಿಸಲ್ಪಟ್ಟ ವಿಷಯಗಳೇ ಅವರ ಪ್ರಕರಣ ಗ್ರಂಥಗಳಲ್ಲೂ ಪ್ರತಿಪಾದಿಸಲ್ಪಟ್ಟಿವೆ. ಪ್ರತಿಪಾದನ ರೀತಿ ಮೊದಲಾದವುಗಳಿಂದ ವೇದಾಂತಕ್ಷೇತ್ರದಲ್ಲಿ ಪ್ರಕರಣ ಗ್ರಂಥಗಳಿಗೂ ವಿಶಿಷ್ಟ ಸ್ಥಾನವಿದೆ. **ಶ್ರೀ ಶಂಕರಭಗವತ್ಪಾದರು** ರಚಿಸಿದ ಒಂದೊಂದು ಪ್ರಕರಣಗ್ರಂಥವೂ ಅದರದ್ದೇ ಆದ ವೈಶಿಷ್ಟ್ಯವನ್ನು ಹೊಂದಿದೆ. **'ದಶಶ್ಲೋಕೀ'** ಹತ್ತೇ ಶ್ಲೋಕಗಳ ಗ್ರಂಥವಾದರೂ ವಿಷಯಗಾಂಭೀರ್ಯದಿಂದ ವಿದ್ವತ್ ಸಮುದಾಯದಲ್ಲಿ ಎತ್ತರದ ಸ್ಥಾನವನ್ನು ಅಲಂಕರಿಸಿದೆ. ನಿರ್ವಾಣಷಟ್ಕವನ್ನು ಮನೆ ಮನೆಗಳಲ್ಲಿ ನಿತ್ಯಪಾರಾಯಣ ಮಾಡುತ್ತಿರುವುದನ್ನು ಇವತ್ತೂ ಕಾಣಬಹುದು. ವೇದಾಂತಭಾರತಿಯು ದಶಶ್ಲೋಕೀ ಅಭಿಯಾನದ ಸಂದರ್ಭದಲ್ಲಿ **'ನಾನು** ಒಂದು ಪರಿಚಯ' ಅನ್ನುವ ಒಂದು ಚಿಕ್ಕ ಪುಸ್ತಕವನ್ನು ಪ್ರಕಟಿಸುತ್ತಿರುವುದು ಅತ್ಯಂತ ಸಂತೋಷದ ವಿಷಯ. ದಶಶ್ಲೋಕಿಯ ತಾತ್ಪರ್ಯದ ಜೊತೆಗೆ ನಿರ್ವಾಣಷಟ್ಕ ಹಾಗೂ ಗುರ್ವಷ್ಟಕಗಳ ಸಾರವನ್ನು ಒಳಗೊಂಡಿರುವ ಈ ಪುಸ್ತಕವು ಆಸ್ತಿಕರಿಗೆ ಸಾಧನಮಾರ್ಗದಲ್ಲಿ ಒಂದು ಕೈದೀವಿಗೆ ಆಗುವುದರಲ್ಲಿ ಸಂದೇಹವಿಲ್ಲ.

ವೇದಾಂತಭಾರತಿಯ ಎಲ್ಲ ಕಾರ್ಯಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿರುವ ಅಸ್ಮದತ್ಯಂತಪ್ರಿಯರಾದ ಹಿರಿಯ ವಿದ್ವಾಂಸರಾದ ಭುವನಗಿರಿ ಅನಂತಶರ್ಮರು ಮೂಲಕ್ಕೆ ಅನುಸಾರಿಯಾಗಿ ತಿಳಿಕನ್ನಡದಲ್ಲಿ ಬಹಳ ಪರಿಶ್ರಮವನ್ನು ವಹಿಸಿ ಈ ಗ್ರಂಥವನ್ನು ರಚಿಸಿದ್ದಾರೆ. ಅವರಿಗೂ ಉಳಿದ ಕಾರ್ಯಕರ್ತರಿಗೆಲ್ಲ ನಮ್ಮ ಆರಾಧ್ಯಮೂರ್ತಿಯು ಪರಿಪೂರ್ಣಾನುಗ್ರಹವನ್ನು ಮಾಡಲಿ ಎಂದು ಪ್ರಾರ್ಥಿಸುತ್ತೇವೆ.

ವಿಕೃತಿ ಸಂ॥ದ ಆಶ್ವಯುಜ
ಕೃಷ್ಣ ಪಂಚಮೀ ಬುಧವಾರ
ದಿ : 27–10–2010



ನಾರಾಯಣಸ್ಮರಣಮ್

# ನಿವೇದನೆ

ಲೋಕದಲ್ಲಿ 'ನಾನು' ಎಂಬ ತಿಳಿವಳಿಕೆಗೆ ಆಧಾರವಾಗಿರುವುದು ಆತ್ಮವಸ್ತು. ಸ್ವತಃ ಸಿದ್ಧವಾದ ಆತ್ಮವಸ್ತುವಿನ ಬಗ್ಗೆ ಸರಿಯಾದ ಜ್ಞಾನ ನಮಗಿಲ್ಲ. ನಾವು ಸದಾ ಶರೀರವೇ ನಾನು, ಇಂದ್ರಿಯಗಳೇ ನಾನು, ಮನಸ್ಸು ನಾನು ಎಂದೆಲ್ಲ ಎಣಿಸುತ್ತೇವೆ. ಒಮ್ಮೆ ಶುದ್ಧಮನಸ್ಸಿನಲ್ಲಿ ಶಾಂತವಾಗಿ ಕುಳಿತು ವಿಚಾರ ಮಾಡಿದರೆ ಎಚ್ಚರ ಕನಸು–ಗಾಢನಿದ್ರೆಗಳೆಂಬ ಮೂರು ಅವಸ್ಥೆಗಳಲ್ಲಿ ಸದಾ ಸಾಕ್ಷಿಯಾಗಿ ಇರುವ ನಮ್ಮ ನಮ್ಮ ಸ್ವರೂಪವೇ ನಾನು ಎಂಬ ಅರಿವು ನಮಗೆ ಬರುತ್ತದೆ. ನಾನು ನಿನ್ನೆ ಸುಖವಾಗಿ ನಿದ್ರಿಸಿದೆ ಎಂಬ ಅರಿವು ಮೂಡುವುದು ನಿದ್ರೆಯಿಂದ ಎದ್ದ ನಂತರವೇ. ಗಾಢನಿದ್ರೆಯಲ್ಲಿ ಅದಾವ ಲೌಕಿಕ ವ್ಯವಹಾರವೂ ಇರುವುದಿಲ್ಲ. ನಾನು–ನನ್ನದು, ಇದು–ಅದು, ತಂದೆ–ತಾಯಿ ಎಲ್ಲವೂ ದೂರವಾಗಿರುವುವು.

ಇಂತಹ ಸ್ಥಿತಿಯಲ್ಲಿರುವ ನಾನು ಯಾರು ನಿಜವಾಗಿ ನನ್ನ ಅಸ್ತಿತ್ವವೇನು? ನನ್ನ ಸ್ವರೂಪವೇನು ಎಂಬುದನ್ನು ಶ್ರೀ ಶಂಕರರು ಉಪನಿಷತ್ ಸಿದ್ಧಾಂತದ ಹಿನ್ನೆಲೆಯಲ್ಲಿ ನಮ್ಮ ಮುಂದೆ ಇಟ್ಟಿದ್ದಾರೆ. ಇಂತಹ ನನ್ನ ಸ್ವರೂಪದ ನಿಜವಾದ ಅರಿವು ನಮಗೆ ಆಗಬೇಕಾದರೆ ಸದ್ಗುರುವಿನ ಕೃಪೆ ನಮ್ಮ ಮೇಲಿರಬೇಕು. ಗುರುಚರಣಗಳಲ್ಲಿ ಶ್ರದ್ಧೆ–ಭಕ್ತಿಗಳು ಇದ್ದಲ್ಲಿ ಶುದ್ಧವಾದ ಚಿಂತನೆಗೆ ಒಂದು ಬೆಳಕು ಸಿಗುವುದು. ಈ ಬೆಳಕೇ ಎಲ್ಲ ಬೆಳಕಿಗೂ ಮೂಲ. ಅದರಿಂದಲೇ ಎಲ್ಲವೂ ಬೆಳಗುವುವು ಎಂಬ ಜ್ಞಾನವನ್ನು ದಯಪಾಲಿಸಿ ನಮ್ಮನ್ನು ಮೇಲೆತ್ತುವ ಗುರುವಿನ ಸ್ಥಾನವು ದೊಡ್ಡದು. ಆ ಗುರುವು ನಮ್ಮ ಅಜ್ಞಾನವನ್ನು ಕಳೆದು ಸುಜ್ಞಾನವನ್ನು ನೀಡುವನು. "ಯಾವ ಒಂದನ್ನು ಅರಿತರೆ ಎಲ್ಲವನ್ನೂ ಅರಿಯಬಹುದೋ" ಎಂಬ ಉಪನಿಷತ್ತಿನ ಸಂದೇಶವನ್ನು ಕೇಂದ್ರೀಕರಿಸಿ ನಾಡಿನ ಹಿರಿಯ ವಿದ್ವಾಂಸರಾದ **ಅನಂತಶರ್ಮಾ ಭುವನಗಿರಿಯವರು** ದಶಶ್ಲೋಕೀ, ನಿರ್ವಾಣಷಟ್ಕ ಹಾಗೂ ಗುರ್ವಷ್ಟಕದ ತಿರುಳನ್ನು 'ನಾನು' ಒಂದು ಪರಿಚಯ ಈ ಚಿಕ್ಕ ಪುಸ್ತಕದಲ್ಲಿ ವಿವರಿಸಿದ್ದಾರೆ. ಅವರಿಗೆ ಅನಂತ ಧನ್ಯವಾದಗಳು. "ದಶಶ್ಲೋಕೀ ಮಹಾಭಿಯಾನದ ಈ ಪವಿತ್ರ ಸಂದರ್ಭದಲ್ಲಿ ನಿಜವಾಗಿ 'ನಾನು ಯಾರು' ಎಂಬ ಜ್ಞಾನಜ್ಯೋತಿಯು ಎಲ್ಲರ ಮನೆ–ಮನಗಳನ್ನು ಬೆಳಗಲಿ ಎಂದು ವೇದಾಂತಭಾರತಿಯು ಹಾರೈಸುತ್ತದೆ.

ಈ ಗ್ರಂಥವನ್ನು ಆಮೂಲಾಗ್ರವಾಗಿ ವೀಕ್ಷಿಸಿ ನಮ್ಮನ್ನು ಅನುಗ್ರಹಿಸಿ ಶ್ರೀಮುಖವನ್ನಿತ್ತ ದಕ್ಷಿಣಾಮ್ನಾಯ ಶೃಂಗೇರೀ ಶಾರದಾಪೀಠಾಧೀಶರೂ, ವೇದಾಂತಭಾರತಿಯ ಮಹಾಸಂರಕ್ಷಕರೂ ಆದ **ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ** ಚರಣಕಮಲಗಳಲ್ಲಿ ಅನಂತ ಸಾಷ್ಟಾಂಗ ಪ್ರಣಾಮಗಳು. ವೇದಾಂತಭಾರತಿಯ ಸಂರಕ್ಷಕರಾದ **ಪರಮಪೂಜ್ಯ ಶ್ರೀ ಶ್ರೀ ಶಂಕರಭಾರತೀ ಮಹಾಸ್ವಾಮಿಗಳವರು** ನಮ್ಮನ್ನು ಸದಾ ಮುನ್ನಡೆಸುತ್ತಿದ್ದಾರೆ. ಪರಮಪೂಜ್ಯರ ಚರಣಗಳಲ್ಲಿ ಸಾಷ್ಟಾಂಗಪ್ರಣಾಮಗಳು. ನಾಡಿನಾದ್ಯಂತ ಸಮಸ್ತ ಆಸ್ತಿಕರ ಮನೆ–ಮನಗಳಲ್ಲಿ ಈ ಪುಸ್ತಕ ಸದಾ ಜ್ಞಾನನಿಧಿಯಾಗಿರಲೆಂದು ಭಾವಿಸುತ್ತೇವೆ.

ಈ ಪುಸ್ತಕದ ಮುಖಪುಟವಿನ್ಯಾಸ ಮಾಡಿಕೊಟ್ಟ ಬೆಂಗಳೂರಿನ ಶ್ರೀ ಎಮ್. ಮೋಹನ್‌ರವರಿಗೂ, ಅಂದವಾಗಿ ಮುದ್ರಿಸಿಕೊಟ್ಟ ಸ್ವಾ್ಯನ್ ಪ್ರಿಂಟ್‌ನ ಮಾಲೀಕರಿಗೂ ಕೃತಜ್ಞತೆಗಳು.

ವಿಕೃತಿ ಸಂ॥ದ ಆಶ್ವಯುಜ
ಕೃಷ್ಣ ಚತುರ್ದಶೀ ಶುಕ್ರವಾರ
ದಿ : 5–11–2010

ಡಾ॥ ಶ್ರೀಧರ ಭಟ್ಟ ಐನಕೈ
ನಿರ್ದೇಶಕರು,
ವೇದಾಂತಭಾರತೀ

# 'ನಾನು'

## ಒಂದು ಪರಿಚಯ

'ನಾನು ಇಂಥವನು ಎಂದು ಮಾನವನು ತನ್ನನ್ನು ತಾನು ಅರಿತುಕೊಂಡನಾದರೆ ಯಾರಿಗಾಗಿ ಮತ್ತು ಯಾಕಾಗಿ ಪರಿತಪಿಸುತ್ತಾನೆ' ಎನ್ನುತ್ತದೆ ಶ್ರುತಿ. (ಬೃಉ. 4.4.12) ನಮ್ಮ ಸಕಲ ತಾಪಗಳ ನಿವಾರಣೆಗೆ ಆತ್ಮಜ್ಞಾನವೊಂದೇ ದಿವ್ಯೌಷಧ ಎಂಬುದು ಇದರ ತಾತ್ಪರ್ಯ. ಮನುಕುಲದ ಹಿತವನ್ನೇ ಬಯಸುವ ಶ್ರೀ ಶಂಕರಾಚಾರ್ಯರು ತಮ್ಮ ಕೃತಿಗಳ ಮೂಲಕ ಇಂಥ ಆತ್ಮಜ್ಞಾನ ಸಕಲರಿಗೂ ದೊರಕುವಂತೆ ಮಾಡಿದರು. 'ಮೊದಲು ನಿನ್ನನ್ನು ಅರಿತುಕೋ' ಎಂಬ ಆಚಾರ್ಯರ ಉಪದೇಶ ಯಾವುದೇ ಒಂದು ಜಾತಿಗಾಗಲಿ, ದೇಶಕ್ಕಾಗಲಿ, ಧರ್ಮಕ್ಕಾಗಲಿ ಸೀಮಿತವಲ್ಲ. ಆತ್ಮೋದ್ಧಾರವನ್ನು ಬಯಸುವ ಸಕಲರೂ ಕೇಳಬೇಕಾದ ಉಪದೇಶವಿದು. ಆದ್ದರಿಂದಲೇ ಅವರು ನಿಜವಾದ ಅರ್ಥದಲ್ಲಿ ಜಗದ್ಗುರುಗಳು. ಆತ್ಮಜ್ಞಾನವೆಂಬ ಧ್ಯೇಯದ ಕಡೆ ಮಾತ್ರ ಬೆರಳುಮಾಡಿ ತೋರಿ ಸುಮ್ಮನಿರದೆ ಅದನ್ನು ತಲುಪುವ ಮಾರ್ಗವನ್ನೂ ತೋರಿಸಿಕೊಟ್ಟು ಅವರು

ಲೋಕದ ಮಾರ್ಗದರ್ಶಕರೂ ಆದರು. ಜನರ ಅಭಿರುಚಿ, ಸಂಸ್ಕಾರ, ಬುದ್ಧಿಯ ಮಟ್ಟ ಎಲ್ಲ ಬೇರೆ ಬೇರೆ. ಇದಕ್ಕಾಗಿ ಆಚಾರ್ಯರು, ಭಾಷ್ಯಗ್ರಂಥ, ಪ್ರಕರಣಗ್ರಂಥ, ಸ್ತೋತ್ರಗ್ರಂಥಗಳನ್ನು ರಚಿಸಿ ಎಲ್ಲ ಸ್ತರದ ಜನರನ್ನು ಆತ್ಮಾಭಿಮುಖರನ್ನಾಗಿ ಮಾಡಿದರು. ಅಹೇತುಕದಯಾಸಿಂಧುವಾದ ಆಚಾರ್ಯರು ರಚಿಸಿದ ಪ್ರಕರಣಗ್ರಂಥಗಳಲ್ಲಿ ದಶಶ್ಲೋಕೀ, ನಿರ್ವಾಣಷಟ್ಕ ಈ ಎರಡು ಅತ್ಯಂತ ವಿಶಿಷ್ಟವಾದವುಗಳು. ಈ ಎರಡು ಸ್ತೋತ್ರಗಳ ಹಾಗೂ ಗುರ್ವಷ್ಟಕದ ಸಾರಾಂಶವನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಭಗವಂತನು ಪ್ರಪಂಚದ ಸೃಷ್ಟಿಕರ್ತನು ಮಾತ್ರವಲ್ಲ. ಅದರ ಪಾಲನೆಯ ಹೊಣೆಯನ್ನು ಹೊತ್ತವನೂ ಹೌದು. ಕರುವು ಹುಟ್ಟುವುದಕ್ಕೆ ಮುಂಚೆಯೇ ತಾಯಿಯ ಕೆಚ್ಚಲಿನಲ್ಲಿ ಅದರ ಆಹಾರ ವ್ಯವಸ್ಥೆಯನ್ನು ಮಾಡಿಟ್ಟಿರುತ್ತಾನೆ. ತಾನು ಸೃಷ್ಟಿಸಿದ ಜನರಿಗಾಗಿ ಫಲವತ್ತಾದ ನೆಲ, ಮಧುರವಾದ ಜಲ, ಗಾಳಿ, ಬೆಳಕು ಎಲ್ಲವನ್ನೂ ನೀಡಿದ್ದಾನೆ. ಆದರೆ ಮಾನವರು ಮಾಡುತ್ತಿರುವುದೇನು? ಅದನ್ನು ಪ್ರೀತಿಯಿಂದ ಪರಸ್ಪರ ಹಂಚಿಕೊಂಡು ತಿಂದು



ನೆಮ್ಮದಿಯಿಂದ ಬದುಕುವುದನ್ನು ಬಿಟ್ಟು 'ಇದು ನನ್ನದು, ನಿನ್ನದಲ್ಲ' ಎಂದು ಬಡಿದಾಡಿ ಭೂಮಿಯನ್ನು ನರಕವಾಗಿಸಿದ್ದಾರೆ. ಈ 'ನಾನು ನೀನು' 'ನನ್ನದು, ನಿನ್ನದು' ಇರುವವರೆಗೂ ಕಲಹ, ಅಶಾಂತಿ ತಪ್ಪಿದ್ದಲ್ಲ. ಬೇಲಿ ಇರುವವರೆಗೂ ಅತಿಕ್ರಮಣಪ್ರಯತ್ನ ನಡೆಯುತ್ತಿರುತ್ತದೆ. ಈ ಬೇಲಿಯನ್ನು ಕಿತ್ತೊಗೆಯಲು ಬೇಲಿಯನ್ನು ಸರಿಯಾಗಿ ಅರಿತುಕೊಳ್ಳುವುದೊಂದೇ ಮಾರ್ಗ. ನಿಜವಾಗಿ ನೋಡಿದರೆ ಈ 'ನಾನು, ನೀನು' ಎಂಬ ಬೇಲಿ ಇಲ್ಲವೇ ಇಲ್ಲ. ಇದು ಆಕಾಶದಲ್ಲಿ ಬರೆದ ಚಿತ್ರ. ಆಕಾಶದಲ್ಲಿ ಚಲಿಸುತ್ತಿರುವ ಮೋಡಗಳನ್ನು ಕಂಡು ಮಕ್ಕಳು ಆನೆ, ಕುದುರೆ ಹೀಗೆ ನಾನಾ ಕಲ್ಪನೆಗಳನ್ನು ಮಾಡಿಕೊಳ್ಳುವಂತೆ ಮನುಷ್ಯರು ಪ್ರಪಂಚದ ಬಗ್ಗೆ ನಾನಾ ಕಲ್ಪನೆಗಳನ್ನು ಮಾಡಿಕೊಳ್ಳುತ್ತಾರೆ. ಆ ಕಲ್ಪನೆಗಳ ಸತ್ಯವನ್ನು ಅರಿಯುತ್ತ ಹೋದಂತೆ ಅವು ಕರಗಿ ಹೋಗುತ್ತವೆ. ಆಗ 'ನಾನು, ನೀನು' ಎಲ್ಲ ಅಳಿದು 'ನಾನು' ಎಂಬುದರ ಅರ್ಥ ಮಾತ್ರ ಶುದ್ಧ ರೂಪದಲ್ಲಿ ಉಳಿಯುತ್ತದೆ. ಇದನ್ನು ತಿಳಿಸಿಕೊಡುವ ಒಂದು ಪುಟ್ಟ



ಪ್ರಯತ್ನವನ್ನು ನಾವು ಆಚಾರ್ಯರ ಈ ದಶಶ್ಲೋಕಿಯಲ್ಲಿ ಕಾಣುತ್ತೇವೆ. ಇಲ್ಲಿ ಆಚಾರ್ಯರು "ಆತ್ಮನು ಏನೇನು ಅಲ್ಲ" ಎಂದು ವಾಚ್ಯವಾಗಿ ಹೇಳುತ್ತಲೇ ಆತ್ಮನೆಂದರೇನೆಂಬುದನ್ನು ಸೂಚ್ಯವಾಗಿ ತಿಳಿಸಿದ್ದಾರೆ. ಅರ್ಥ ಮಾಡಿಕೊಳ್ಳುವ ಪ್ರಯತ್ನ ನಮ್ಮದಾಗಬೇಕು.

ಈ ದೇಹವನ್ನೇ 'ನಾನು' ಎಂದುಕೊಂಡಿರುವವರೆಗೂ ನಮಗೆ, ಆ ದೇಹಕ್ಕೆ, ಅನುಕೂಲವಾದ ವಿಷಯದಲ್ಲಿ ಪ್ರೀತಿಯೂ ಪ್ರತಿಕೂಲವಾದ ವಿಷಯದಲ್ಲಿ ದ್ವೇಷವೂ ಸಹಜ. ಈ ರಾಗದ್ವೇಷಗಳು ಸಂಸಾರಬಂಧನವನ್ನು ಮತ್ತಷ್ಟು ಬಿಗಿಗೊಳಿಸುವ ಕೀಲುಗಳು. ಇವುಗಳಿಂದ ತಪ್ಪಿಸಿಕೊಳ್ಳಬೇಕಾದರೆ ಶರೀರ–ಇಂದ್ರಿಯ–ಮನಸ್ಸು ಇವುಗಳಲ್ಲಿರುವ 'ನಾನು' ಎಂಬ ಅಭಿಮಾನವನ್ನು ಕ್ರಮೇಣ ಹಿಂದಕ್ಕೆ ಪಡೆಯಬೇಕು. ಕೇವಲ ಚಿದಾನಂದರೂಪದಲ್ಲಿ ನಿಲ್ಲಬೇಕು. ಅಂಥವನಿಗೆ ಸಾಧಿಸಬೇಕಾದ ಪುರುಷಾರ್ಥಗಳಿರುವುದಿಲ್ಲ. ಕಳೆದುಕೊಳ್ಳಬೇಕಾದ ಕರ್ಮವಿರುವುದಿಲ್ಲ.



'ನಿತ್ಯಶುದ್ಧಬುದ್ಧಮುಕ್ತಸ್ವಭಾವದ ಶಿವನೇ ನಾನು' ಎಂಬ ಭಾವನೆಯನ್ನು ದೃಢಪಡಿಸಿಕೊಂಡವನು ಜನನಮರಣಪಾಶದಿಂದ ಬಿಡುಗಡೆ ಹೊಂದಿ ಆನಂದಸ್ವರೂಪದಲ್ಲಿ ನೆಲೆನಿಲ್ಲುತ್ತಾನೆಂಬುದನ್ನು ನಾವು ನಿರ್ವಾಣಷಟ್ಕದಲ್ಲಿ ನೋಡಬಹುದು.

ಮನುಷ್ಯನಿಗೆ ಬದುಕಲು ಆಶೆಯಿರಬೇಕು. ಆದರೆ ಅದಕ್ಕೊಂದು ಮಿತಿ ಬೇಕು. ಧನದ ಆಶೆ, ಭೂಮಿಯ ಆಶೆ, ಅಧಿಕಾರದ ಆಶೆ ಇವುಗಳ ಬಲೆಯಲ್ಲಿ ಸಿಲುಕಿ ಇವುಗಳನ್ನು ಪೂರ್ಣಗೊಳಿಸಲು ತನ್ನ ಜೀವನವನ್ನೇ ಸವೆಸುತ್ತಿರುವ ಮಾನವನ ಗುರಿಯೇನು ಎಂದು ಪ್ರಶ್ನಿಸಿದರೆ ವಿವೇಕಿಗಳೂ ಉತ್ತರಿಸಲು ತಡವರಿಸಿಯಾರು. ಬಯಕೆಗಳನ್ನು ಪೂರ್ಣಗೊಳಿಸುವಾಗ ಇರುವ ಉತ್ಸಾಹ ಬಯಕೆ ಪೂರ್ಣಗೊಂಡ ಮೇಲೆ ಇರುವುದಿಲ್ಲ. ಒಂದು ಬಗೆಯ ನಿರ್ವಾತಪ್ರದೇಶ ಉಂಟಾಗಿಬಿಡುತ್ತದೆ. ಭವಿಷ್ಯದ ಕ್ಷಿತಿಜ ಅಂಧಕಾರಮಯವಾಗಿಬಿಡುತ್ತದೆ. ಅಂಥ ಕಡೆ ಯೋಗ್ಯ ಗುರುವಿನ ಮಾರ್ಗದರ್ಶನ–

ವೊಂದೇ ಬೆಳಕನ್ನು ತೋರಬಲ್ಲದು. ಆದ್ದರಿಂದ ನಾವು ಸದ್ಗುರುವಿನ ಪಾದಗಳಿಗೆ ಶರಣಾಗದೆ ಬೇರೆ ಗತಿಯಿಲ್ಲ. 'ನ ಗುರೋರಧಿಕಂ ನ ಗುರೋರಧಿಕಮ್"

ಈ ಮೇಲಿನವು ಆಚಾರ್ಯರ ಸ್ತೋತ್ರವನ್ನು ಕುರಿತಾದ ಕೆಲವು ಮಾತುಗಳು. ಪ್ರತಿಸ್ತೋತ್ರದ ಭಾವವನ್ನು ಇನ್ನಷ್ಟು ಮುಂದೆ ವಿವರವಾಗಿ ನೋಡಬಹುದು. ಇದು ಆಚಾರ್ಯರ ಸ್ತೋತ್ರಗಳ ನೇರವಾದ ಅನುವಾದವಾಗಲಿ, ಸಾರಾಂಶವಾಗಲಿ ಅಲ್ಲ. ಆ ಸ್ತೋತ್ರಗಳಲ್ಲಿ ಹುದುಗಿದ ಭಾವದ ಪ್ರತಿರೂಪವಷ್ಟೆ. ಅರ್ಥಾನುಸಂಧಾನಪೂರ್ವಕವಾಗಿ ಆ ಸ್ತೋತ್ರಗಳ ಪಠನ, ಮನನಗಳು ನಮ್ಮನ್ನು ನಾವು ಅರಿತುಕೊಳ್ಳಲು ಸಹಾಯಕವಾದಾವು. ನಮ್ಮ ಮನಸ್ಸು ಇನ್ನೊಬ್ಬರ ಮಾತು ಮತ್ತು ಕೃತಿಗಳಿಗೆ ಥಟ್ಟನೆ ಪ್ರತಿಸ್ಪಂದಿಸಿ ಪರವಶವಾಗುವಂತಾಗದೆ ತಾನೇ ಸ್ವತಂತ್ರವಾಗಿದ್ದು ಆತ್ಮಾಭಿಮುಖವಾದೀತು. ನಾವು ಮಾನಸಿಕ ಪರಾಧೀನತೆಯನ್ನು ಕಳೆದುಕೊಂಡು ಸ್ವತಂತ್ರರಾದೇವು. ಸಹಜಾನಂದವನ್ನು ಅನುಭವಿಸಿಯೇವು.



# ಗುರ್ವಷ್ಟಕಮ್

ಮಾನವನ ಕನಸುಗಳು ಹಲವಾರು. ಅವುಗಳಲ್ಲಿ ಕೆಲವಾದರೂ ಕೆಲವರಿಗಾದರೂ ನನಸಾಗುತ್ತವೆ. ಕೆಲವರಿಗೆ ಸುಂದರವಾದ ಶರೀರವಿರುತ್ತದೆ. ಅವರಲ್ಲಿ ಕೆಲವರಿಗೆ ಅನುರೂಪರಾದ ಬಾಳಿನ ಜೊತೆಗಾರರೂ ಸಿಗುತ್ತಾರೆ. ನಾಲ್ಕುಕಡೆ ಅವರ ಹೆಸರು ನಲಿದಾಡುತ್ತದೆ. ವೆಚ್ಚಕ್ಕೆ ಆಗಿ ಹೆಚ್ಚಾಗುವಷ್ಟು ಹೊನ್ನೂ ಇರುತ್ತದೆ. ಆದರೆ .... ಬದುಕೆಂದರೆ ಇಷ್ಟೇನಾ? ಇವೆಲ್ಲ ಎಷ್ಟು ದಿನ ಇದ್ದಾವು? ಆಮೇಲೆ? ನಮ್ಮ ಬದುಕು ಸದಾ ಆನಂದಪೂರ್ಣವಾಗಿರಲು ಅದಕ್ಕೊಬ್ಬ ಮಾರ್ಗದರ್ಶಕನು ಬೇಡವೆ? ಅವನಿಗೆ ಶರಣು ಹೋಗಬೇಕು.

ಬಯಕೆಗಳನ್ನು ಪೂರ್ಣಗೊಳಿಸಲು ಹೋರಾಡುತ್ತಿರುವಾಗ ಮನಸ್ಸು ಉದ್ವಿಗ್ನ ಸ್ಥಿತಿಯಲ್ಲಿರುತ್ತದೆ. ಪೂರ್ಣಗೊಂಡಾಗ ಒಂದುಕ್ಷಣ ಅದು ನಿಶ್ಚಲವಾಗುತ್ತದೆ. ಅದನ್ನೇ ನಾವು ಸುಖದ ಕ್ಷಣ



ಎನ್ನುತ್ತೇವೆ. ಆಮೇಲೆ ಮತ್ತೊಂದು ಬಯಕೆಯನ್ನು ಪೂರ್ಣಗೊಳಿಸಲು ಹೋರಾಟ. ಗಂಡ–ಹೆಂಡತಿ ಮಕ್ಕಳು, ಸಂಪತ್ತು, ಒಳ್ಳೆಯ ಮನೆ, ನೆಂಟರು ಹೀಗೆ ನಾವು ಬಯಸಿದ್ದೆಲ್ಲ ಸಿಕ್ಕಿತು ಎನ್ನೋಣ. ಮುಂದೇನು? ತೃಪ್ತಿಯಿಲ್ಲ! ಅದೆಲ್ಲಿ ಸಿಗುತ್ತದೆ? ಅದಕ್ಕಾಗಿ ಗುರುವಿನ ಪಾದವೇ ಗತಿ.

ವಿದ್ಯೆಯು ಬದುಕನ್ನು ಬೆಳಗುತ್ತದೆಯೆಂದು ನಾವು ನಂಬಿದ್ದೇವೆ. ಅದರಂತೆ ನಾವು ಷಡಂಗಸಹಿತವಾದ ವೇದವನ್ನೆಲ್ಲ ಕಂಠಪಾಠಮಾಡಿದ್ದೇವೆ. ಶಾಸ್ತ್ರಪರಿಣತಿಯನ್ನೂ ಸಂಪಾದಿಸಿದ್ದೇವೆ. ಗದ್ಯಪದ್ಯಗಳ ರೂಪದಲ್ಲಿ ಸುಂದರವಾದ ಕಾವ್ಯವನ್ನು ರಚಿಸಬಲ್ಲೆವು. ಇಷ್ಟೆಲ್ಲ ಇದ್ದರೂ ಒಬ್ಬ ಸದ್ಗುರುವಿನ ಚರಣಗಳನ್ನು ಆಶ್ರಯಿಸದಿದ್ದರೆ ನಮ್ಮ ಬದುಕು ಸಾರ್ಥಕವಾದೀತೆ?

ಕೆಲವರು ತಮ್ಮ ದೇಶದಲ್ಲಿ ಸಾಕಷ್ಟು ಜನ–ಧನ–ಕನಕಗಳನ್ನು ಹೊಂದಿರುತ್ತಾರೆ.



ವಿದೇಶದಲ್ಲಿಯೂ ಸಾಕಷ್ಟು ಹೆಸರನ್ನು ಗಳಿಸಿರುತ್ತಾರೆ. ಶೀಲಸದಾಚಾರಗಳಲ್ಲಿಯೂ ನನ್ನನ್ನು ಬಿಟ್ಟರೆ ಇಲ್ಲ ಎನ್ನುವಷ್ಟು ಆಚಾರಸಂಪನ್ನರು. ಆದರೆ ಇವೆಲ್ಲ ಅವರಿಗೆ ಶಾಶ್ವತ ನೆಮ್ಮದಿಯನ್ನು ದೊರಕಿಸಿಕೊಟ್ಟಾವೆಯೇ? ಅದಕ್ಕಾಗಿ ಸದ್ಗುರುಗಳ ಪಾದವನ್ನೇ ಆಶ್ರಯಿಸಬೇಕು.

ಕೆಲವರು ವಂಶಪರಂಪರೆಯಿಂದ ಬಂದ ದೊಡ್ಡ ರಾಜ್ಯಕ್ಕೆ ಉತ್ತರಾಧಿಕಾರಿಗಳು. ಕೆಲವರು ಸ್ವಂತಪರಾಕ್ರಮದಿಂದ ರಾಜ್ಯವನ್ನು ಗಳಿಸಿಕೊಂಡವರು. ಅನೇಕ ಮಾಂಡಲಿಕರಿಗೆ ಪ್ರಭುಗಳು. ಆದರೇನು? ಇವರಿಗಿಂತಲೂ ದೊಡ್ಡ ರಾಜನಾದ ಯಮನು ಇವರ ಬಾಳದಾರಿಯಲ್ಲಿ ಅಡ್ಡನಿಂತಾಗ ಗುರುಚರಣಗಳಲ್ಲದೆ ಮತ್ತಾರು ಕಾಪಾಡಿಯಾರು? ನಾನಾರೀತಿಯ ವಸ್ತುಗಳನ್ನು ಅಪರಿಮಿತವಾಗಿ ದಾನಮಾಡಿ, ದಿಗ್ದೇಶಗಳಲ್ಲಿ ಕೀರ್ತಿಯನ್ನು ಗಳಿಸಿಕೊಂಡದ್ದಾಯಿತು. ಆ ಕೀರ್ತಿಯ ಮಹಿಮೆಯಿಂದಲೇ ಜಗತ್ತಿನ ಎಲ್ಲ ಶ್ರೇಷ್ಠ ವಸ್ತುಗಳೂ ಕೈ ಸೇರಿದವು. ಇಷ್ಟಾದರೂ ನಮ್ಮ

ಮನಸ್ಸು ಸದ್ಗುರುಗಳ ಮಾರ್ಗದರ್ಶನವನ್ನು ಪಡೆಯದಿದ್ದರೆ, ಈ ಸಂಪತ್ತು, ಕೀರ್ತಿ ನಮ್ಮನ್ನು ಎಲ್ಲಿಯವರೆಗೆ ಕಾಪಾಡಿಯಾವು.

ನನಗೆ ಭೋಗದಲ್ಲಾಗಲಿ, ಯೋಗದಲ್ಲಿಯಾಗಲಿ ಆಸಕ್ತಿಯಿಲ್ಲ. ಆನೆ–ಕುದುರೆ ಮುಂತಾದ ರಾಜವೈಭವವೂ ಬೇಕಿಲ್ಲ. ಕಾಮಿನೀ ಕಾಂಚಾಣಗಳಲ್ಲಿಯೂ ಆಸಕ್ತಿಯಿಲ್ಲ. ಇವೆಲ್ಲವನ್ನೂ ನಾನು ಬಿಟ್ಟಿದ್ದೇನೆ. ಆದರೆ ಯಾವುದನ್ನು ಇಟ್ಟುಕೊಳ್ಳಬೇಕೆಂದು ಗೊತ್ತಿಲ್ಲ. ಮುಂದೇನು ಎಂಬ ಪ್ರಶ್ನೆ ನನ್ನನ್ನು ಕಾಡುತ್ತಿದೆ. ಗುರುಚರಣಗಳೇ ನನಗೆ ಮಾರ್ಗದರ್ಶನ ಮಾಡಬೇಕು.

ಈಗ ನನಗೆ ಮನೆಯಲ್ಲಿರಲು ಮನಸ್ಸಿಲ್ಲ. ಅರಣ್ಯವಾಸವೂ ರುಚಿಸುತ್ತಿಲ್ಲ. ಯಾವುದೇ ಕಾರ್ಯದಲ್ಲಿಯೂ ಆಸಕ್ತಿಯಿಲ್ಲ. ಈ ಶರೀರದಲ್ಲಿಯೂ ಇದಕ್ಕೆ ಸಂಬಂಧಪಟ್ಟ ಯಾವುದೇ ವಸ್ತುವಿನಲ್ಲಿಯೂ ಮನಸ್ಸಿಲ್ಲ. ಜೀವನದ ಏಕತಾನತೆ ನನ್ನಲ್ಲಿ ಬೇಸರವನ್ನು ಮೂಡಿಸಿದೆ. ಇದು ಬೇಡವಾಗಿದೆ. ಯಾವುದು ಬೇಕು



ಎಂಬುದು ತಿಳಿಯುತ್ತಿಲ್ಲ. ಜ್ಞಾನಿಗಳಾದ ಗುರುಗಳೇ ನನಗೆ ದಾರಿತೋರಬೇಕು. ಅವರನ್ನು ಆಶ್ರಯಿಸದಿದ್ದರೆ. ನನಗೆ ಬೇರೆ ಗತಿಯಿಲ್ಲ.

## ನಿರ್ವಾಣಷಟ್ಕಮ್

ಪಂಚಭೂತಗಳಿಂದಾದ ಈ ಶರೀರ, ಇದರಲ್ಲಿರುವ ಇಂದ್ರಿಯಗಳು ಇವೇ ನಾನು ಎಂದು ಭಾವಿಸಿದ್ದೆ. ವಿಚಾರ ಮಾಡಿದಾಗ 'ನಾನು' ಎನ್ನುವುದು ಕೇವಲ ಆನಂದರೂಪವೂ ಮಂಗಲಮಯವೂ ಆದ ಶುದ್ಧ ಅರಿವು ಎಂದೇ ನಿಶ್ಚಯಿಸಿದ್ದೇನೆ.

ನಾನು ಪ್ರಾಣವಾಗಲಿ, ಪಂಚಕೋಶಗಳಾಗಲಿ, ಪಂಚಕರ್ಮೇಂದ್ರಿಯಗಳಾಗಲಿ ಅಲ್ಲ. ಅದನ್ನೆಲ್ಲ ಅರಿಯುವ ಸಚ್ಚಿದಾನಂದರೂಪನು ನಾನು.

ದೇಹವೇ ನಾನೆಂದು ಭಾವಿಸಿದಾಗ ಆ ದೇಹಕ್ಕೆ ಉಪಕಾರ ಮಾಡುವವರ ಮೇಲೆ ಪ್ರೀತಿ, ಅಪಕಾರ ಮಾಡುವವರ ಮೇಲೆ ದ್ವೇಷ ಸಹಜ. ಈಗ



ಆ ದೇಹವೇ ನಾನಲ್ಲವೆಂದಾದ ಮೇಲೆ ಆ ರಾಗದ್ವೇಷಗಳೂ ನನಗಿಲ್ಲ. ಪುರುಷಾರ್ಥಗಳೂ ನನಗಿಲ್ಲ.

ಶಾರೀರಿಕ ಹಾಗೂ ಮಾನಸಿಕ ಕರ್ಮಗಳು ಪುಣ್ಯವನ್ನೋ ಪಾಪವನ್ನೋ ಉಂಟುಮಾಡುತ್ತವೆ. ಹೀಗಾಗಿ ಪಾಪಪುಣ್ಯಗಳು ಶರೀರ ಹಾಗೂ ಮನಸ್ಸಿಗೇ ವಿನಾ ನನಗಲ್ಲ. ಅವುಗಳಿಗಾಗಿ ನಾನು ಮಂತ್ರ ತೀರ್ಥ ಯಾವುದನ್ನೂ ಅವಲಂಬಿಸಬೇಕಾಗಿಲ್ಲ.

ಜಾತಿಯಿರುವುದು ಶರೀರಕ್ಕೆ. ತಂದೆತಾಯಂದಿರು ಶರೀರಕ್ಕೆ. ಹುಟ್ಟು ಸಾವುಗಳು ಶರೀರಕ್ಕೆ. ನಾನು ಈ ಶರೀರವಲ್ಲವೆಂದಾದಾಗ ಇವಾವುವೂ ನನಗಿಲ್ಲ. ನಾನು ಕೇವಲ ಚಿದಾನಂದನು. ಮಂಗಲರೂಪನು.

ನನ್ನಲ್ಲಿ ನಾನಾ ವಿಕಲ್ಪಗಳಿಲ್ಲ. ನಾನು ನಿರಾಕಾರನು. ಸರ್ವವ್ಯಾಪಿಯು. ನನಗೆ ಬಂಧನವೇ ಇಲ್ಲ. ಇನ್ನು ಮುಕ್ತಿಯ ಪ್ರಶ್ನೆ ಎಲ್ಲಿಂದ? ನಾನು ಸಚ್ಚಿದಾನಂದಸ್ವರೂಪನು. ಸದಾಶಿವನು.



## ದಶಶ್ಲೋಕೀ

'ನಾನು' ಎಂದರೆ ಈ ಶರೀರವೆಂದೇ ಸಾಮಾನ್ಯರ ಕಲ್ಪನೆ. ಈ ಶರೀರವು ಮಣ್ಣು, ನೀರು, ಗಾಳಿ, ತೇಜಸ್ಸು (ಉಷ್ಣತೆ) ಇವೆಲ್ಲ ಸೇರಿ ಆಗಿದ್ದೆಂದು ಹಾಗೆ ಸೇರಿದಾಗ ಅವುಗಳಲ್ಲಿ ಒಂದು ಶಕ್ತಿಯುಂಟಾಗಿ ಅದೇ ಜೀವನೆನಿಸಿಕೊಳ್ಳುತ್ತದೆ ಎಂದೂ ಅವರು ಹೇಳುತ್ತಾರೆ. ಶರೀರವೇ ನಾನು, ಶರೀರದ ಸುಖವೇ ನನ್ನ ಸುಖ. ಅದಕ್ಕಾಗಿ ನಾನು ಹಗಲಿರುಳೂ ದುಡಿಯಬೇಕು. ಧನಕನಕಗಳನ್ನು ಕೂಡಿಹಾಕಬೇಕು. ಮತ್ತೊಬ್ಬರಿಗೆ ಕೊಡಬಾರದು ಹೀಗೇ ಮುಂದುವರಿಯುತ್ತದೆ ಯೋಚನೆ. ಆದರೆ 'ನಾನು' ಎಂದರೆ ಶರೀರಮಾತ್ರವೇ? ಮರಣಹೊಂದಿದ ಮೇಲೂ ಶರೀರ ಹಾಗೇ ಇರುತ್ತದಲ್ಲ! ಆದರೆ 'ಯಾರಲ್ಲಿ?' ಎಂದು ಕೇಳಿದರೆ 'ನಾನು' ಎಂದು ಉತ್ತರಿಸುವವನಿರುವುದಿಲ್ಲವಲ್ಲ! ಇದನ್ನು ಯೋಚಿಸಿಯಾದರೂ 'ನಾನು' ಶರೀರಕ್ಕಿಂತ ಹೊರತಾದವನು ಎಂದು ತಿಳಿಯಬಾರದೇ?

ಸಮಾಜದಲ್ಲಿ ನಾಲ್ಕು ವರ್ಣಗಳೂ ಆ ವರ್ಣಗಳಿಗೆ ಬೇರೆ ಬೇರೆ ಕರ್ತವ್ಯವೂ ಆಚಾರಗಳೂ ಇರುತ್ತವೆ. ಆದರೆ ನನಗೆ ಈ ವರ್ಣಗಳಾವುವೂ ಇಲ್ಲ. ಅಂದರೆ ನಾನು ಯಾವ ವರ್ಣಕ್ಕೂ ಸೇರಿದವನಲ್ಲ. ಅದೇ ರೀತಿ ಬ್ರಹ್ಮಚರ್ಯ, ಗಾರ್ಹಸ್ಥ, ಮುಂತಾದ ಯಾವ ಆಶ್ರಮಗಳೂ ವಾಸ್ತವವಾಗಿ ನನಗಿಲ್ಲ. ಏಕೆಂದರೆ ಇವೆಲ್ಲ ಹುಟ್ಟನ್ನು ಅವಲಂಬಿಸಿ ಬರುವಂಥವು. ಹುಟ್ಟಿದ್ದು ಶರೀರ, ಆದ್ದರಿಂದ ಇವೆಲ್ಲ ಶರೀರಕ್ಕೆ ವಿನಾ ನನಗಲ್ಲ. ಇವೆಲ್ಲವೂ ನಾನೇ ಅಥವಾ ನನ್ನದೇ ಅಂದುಕೊಂಡು ಹೆಮ್ಮೆ ಪಟ್ಟುಕೊಳ್ಳುವುದು, ಅಹಂಕಾರದಿಂದ ಮತ್ತೊಬ್ಬನನ್ನು ಕೀಳಾಗಿ ಕಾಣುವುದು ಅಥವಾ ಕೀಳರಿಮೆಪಟ್ಟುಕೊಂಡು ಕೊರಗುವುದು ಇದಾವುದನ್ನೂ ಮಾಡೆನು. ನಾನು ಕೇವಲ ಆನಂದಸ್ವರೂಪನು.

ಲೋಕದಲ್ಲಿ ಎಲ್ಲರಿಗೂ ಇರುವಂತೆ ನನಗೂ ತಂದೆ ತಾಯಿ ಎಲ್ಲರೂ ಇದ್ದಾರೆ. ಸ್ವರ್ಗದಲ್ಲಿ ದೇವತೆಗಳಿದ್ದಾರೆಂದು ನಂಬಿ ಪೂಜಿಸುತ್ತೇನೆ. ಆದರೆ ಇವೆಲ್ಲ ನಟನೊಬ್ಬನು ರಂಗದ ಮೇಲೆ ಮಾಡುವ



ನಟನೆಯಂತೆ. ರಂಗದ ಮೇಲೆ ಅವನಿಗೆ ಶತ್ರು-ಮಿತ್ರರಿರುತ್ತಾರೆ. ಹಿರಿ-ಕಿರಿಯರಿರುತ್ತಾರೆ. ಬಣ್ಣದ ಮನೆಗೆ ಹೋಗಿ ವೇಷ ಕಳಚಿದ ಮೇಲೆ ಇದಾವ ಸಂಬಂಧವೂ ಇರುವುದಿಲ್ಲ. ನನಗೂ ಹಾಗೆಯೇ; ನನ್ನ ಬಣ್ಣದ ಮನೆ ಗಾಢ ನಿದ್ದೆ. ಅಲ್ಲಿ ನನಗೆ ತಂದೆ-ತಾಯಿ ಸ್ವರ್ಗ ನರಕ ಯಾವುದೂ ಇರುವುದಿಲ್ಲ. ಆದ್ದರಿಂದ ಆ ಸಂಬಂಧ ಸತ್ಯವಲ್ಲ. ಗಾಢನಿದ್ದೆಯಲ್ಲಿ ಏನೂ ಇಲ್ಲ ಎಂದರೆ 'ಸರ್ವಶೂನ್ಯ' ಎಂದು ಭಾವಿಸಬೇಕಿಲ್ಲ. ಏನೂ ಇಲ್ಲ ಎಂಬುದನ್ನು ಅರಿಯುವ ನಾನಿದ್ದೇನಲ್ಲ!

ಯಾವುದಾದರೊಂದು ವಸ್ತುವನ್ನು ಗುರುತಿಸುವಾಗ ನಾವು ಅದನ್ನು ಅದರ ಕೆಲವು ಲಕ್ಷಣಗಳ ಮೂಲಕ ಗುರುತಿಸುತ್ತೇವೆ. ಅದರ ಬಣ್ಣ, ಆಕಾರ, ಗುಂಪು, ಮಾಡುತ್ತಿರುವ ಕೆಲಸ ಯಾವುದಾರೂ ಆಗಬಹುದು. ಇದಾವುದೂ ಇಲ್ಲದ ವಸ್ತುವು ನಮ್ಮ ಅನುಭವಕ್ಕೆ ಬಾರದು. ಆದರೆ ಇಲ್ಲೊಂದು ವಸ್ತುವಿದೆ. ಅದಕ್ಕೆ ಇದಾವ ಗುಣಗಳೂ ಇಲ್ಲವಾದರೂ ಅದು ನಮ್ಮ ಅನುಭವಕ್ಕೆ ಬರುತ್ತದೆ. ಅದಕ್ಕೆ ಕಾರಣ ಅದು ನಮ್ಮ



ಅನುಭವವೇ ಆಗಿದೆ! ಅಲ್ಲಲ್ಲ. ನಾವೇ ಆ ಅನುಭವವಾಗಿದ್ದೇವೆ. ನಮ್ಮ ಅನುಭವವು ಅಥವಾ ಅನುಭವಸ್ವರೂಪರಾದ ನಾವು ಬಣ್ಣ, ಆಕಾರ, ವಾಸನೆ ಮುಂತಾದ ಯಾವ ರೂಪಗಳೂ ಇಲ್ಲದವರಾಗಿದ್ದೇವೆ. ಆದ್ದರಿಂದಲೇ ಕೇವಲ ಆನಂದಸ್ವರೂಪರು. ಸಾಂಖ್ಯಾದಿ ಮತಗಳು ಹೇಳುವಂತೆ ನಾನಿಲ್ಲ.

ನನಗೆ ಮೇಲೆ-ಕೆಳಗೆ, ಒಳಗೆ-ಹೊರಗೆ ಎಂಬುದೇನೂ ಇಲ್ಲ. ನಾನು ಆಕಾಶದಂತೆ ಎಲ್ಲ ಕಡೆ ಇದ್ದೇನೆ. ಏಕೆಂದರೆ ನನಗೆ ಇಂಥದೇ ಆದ ಆಕಾರವೆಂಬುದಿಲ್ಲ. ನಾನು ಅಖಂಡನು ಅಂದರೆ ಭಾಗ ಮಾಡಲಾಗದವನು. ಕೇವಲ ಆನಂದಸ್ವರೂಪನಾದ ನನ್ನನ್ನು ತುಂಡರಿಸಲು ಸಾಧ್ಯವೆ? ಇಷ್ಟು ಉದ್ದ, ಇಷ್ಟು ಅಗಲ, ಇಲ್ಲಿ ಮಾತ್ರ ಇದೆ ಎನ್ನಲು ಶಕ್ಯವೇ? ಹೀಗೆ ಆಕಾಶದಂತೆ ಎಲ್ಲೆಲ್ಲೂ ಇರುವ ನಾನು ಅವನಲ್ಲಿಯೂ ಇದ್ದೇನೆ. ನಿನ್ನಲ್ಲಿಯೂ ಇದ್ದೇನೆ. ಎಲ್ಲೆಲ್ಲಿಯೂ ಇದ್ದೇನೆ. ಆದ್ದರಿಂದ ಯಾರನ್ನು ದ್ವೇಷಿಸಲಿ? ಯಾರನ್ನು ದೂರವಿಡಲಿ? ಎಲ್ಲರೂ ನನ್ನವರೇ- ಅಥವಾ ಎಲ್ಲರೂ



ನಾನೇ. ಎಲ್ಲ ಕಡೆಯೂ ಏಕತ್ವವನ್ನೇ ಕಾಣುವವನಿಗೆ ಮೋಹವೂ ಇಲ್ಲ ಶೋಕವೂ ಇಲ್ಲ ಎನ್ನುತ್ತದೆ ಉಪನಿಷತ್ತು.

ಆತ್ಮನು ಅರೂಪನು, ಅಂದರೆ ತಿಳಿಯಲಾರದವನು. ಅವನನ್ನು ತಿಳಿಯಲು ಯಾವ ಹೆಗ್ಗುರುತುಗಳೂ ಇಲ್ಲ. ಅವನು ಬೆಳಕಿನಂತೆ. ಬೆಳಕು ಬೇರೆಯ ವಸ್ತುಗಳನ್ನು ಬೆಳಗುತ್ತದೆ. ಬೆಳಕನ್ನು ಬೆಳಗುವ ಬೇರೆ ಬೆಳಕಿಲ್ಲ. ಅದು ತಾನೇ ತಾನಾಗಿ ಬೆಳಗುತ್ತಿರುತ್ತದೆ. ಅಂತೆಯೇ ಆತ್ಮನು ತನ್ನನ್ನುಳಿದ ಇತರ ಪ್ರಪಂಚವನ್ನೆಲ್ಲ ಬೆಳಗುತ್ತಾನೆ ಅಂದರೆ ಅರಿಯುತ್ತಾನೆ. ತಾನಾದರೋ ಕೇವಲ ಅರಿವಿನ ಸ್ವರೂಪದವನು. ಆದುದರಿಂದಲೇ ಅವನು ಅಪ್ರಮೇಯನು, ಚಿನ್ಮಯನು. ಸ್ವಯಂಜ್ಯೋತಿ, ಪರಂಜ್ಯೋತಿ ಎಂದು ಶ್ರುತಿಸ್ಮೃತಿಗಳಲ್ಲಿ ಹೊಗಳಲ್ಪಟ್ಟವನು. 'ಅವನು ಜ್ಯೋತಿಗಳ ಜ್ಯೋತಿ' ಎಂದು ಉಪನಿಷತ್ತುಗಳು ಅವನನ್ನು ಬಣ್ಣಿಸುತ್ತವೆ.

ಆತ್ಮನು ಕೇವಲ ಜ್ಯೋತಿಃಸ್ವರೂಪನು, ಜ್ಞಾನಸ್ವರೂಪನು ಎಂದಾದ ಮೇಲೆ ಅವನಲ್ಲಿ

ಭೇದವಿರಲು ಸಾಧ್ಯವಿಲ್ಲ. ಹಾಗಿದ್ದರೆ ಲೋಕದಲ್ಲಿ ತಂದೆ–ಮಗ, ಗಂಡ–ಹೆಂಡತಿ, ಪಶು–ಪಕ್ಷಿ ಮುಂತಾದ ನಾನಾ ಭೇದಗಳಿವೆಯಲ್ಲ! ಇವೆಲ್ಲ ಶಾಸ್ತ್ರಜ್ಞಾನದಿಂದ ಹೊರಟುಹೋಗುತ್ತವೆಯೆಂದೊಪ್ಪಿದರೂ ಆ ಶಾಸ್ತ್ರವನ್ನು ತಿಳಿಯುವ ಮಾರ್ಗದಲ್ಲಿಯೇ ಭೇದವಿದೆಯಲ್ಲ! ಗುರು–ಶಿಷ್ಯ, ಶಾಸ್ತ್ರ–ಶಿಕ್ಷಣ ಮುಂತಾದ ಭೇದವಿಲ್ಲದಿದ್ದರೆ ಶಿಷ್ಯನಾದವನು ಗುರುವಿನ ಬಳಿ ಹೋಗಿ ಶಾಸ್ತ್ರವನ್ನು ಅರಿಯುವುದಾದರೂ ಹೇಗೆ? ಹೌದು. ಈ ಎಲ್ಲ ಭೇದವನ್ನು ನಾವು ಈಗ ಅಂದರೆ ಅವಿದ್ಯಾವಸ್ಥೆಯಲ್ಲಿ ಕಾಣುತ್ತಿದ್ದೇವೆ. ಸ್ವಪ್ನವನ್ನು ಕಾಣುತ್ತಿದ್ದವರಂತೆ ಇದು. ಸ್ವಪ್ನದಲ್ಲಿ ಘೋರಾರಣ್ಯದಲ್ಲಿ ನಡೆಯುತ್ತಿದ್ದ ನಮ್ಮನ್ನು ಹೆಬ್ಬುಲಿಯೊಂದು ಅಟ್ಟಿಸಿಕೊಂಡು ಬಂದಾಗ ಹೆದರಿ ನಡುಗಿ ಎಚ್ಚೆತ್ತುಕೊಳ್ಳುತ್ತೇವೆ. ಆಮೇಲೆ ಎಲ್ಲಿಯ ಕಾಡು? ಎಲ್ಲಿಯ ಹುಲಿ? ನಮ್ಮ ಅಜ್ಞಾನಾವಸ್ಥೆಯಲ್ಲಿ ತೋರಿದ ಸ್ವಪ್ನ ನಾವು ಎಚ್ಚೆತ್ತಮೇಲೆ ಹೇಗೆ ಅರ್ಥವನ್ನು ಕಳೆದುಕೊಳ್ಳುತ್ತದೋ ಹಾಗೆಯೇ ಆತ್ಮಜ್ಞಾನವಾದ ಮೇಲೆ ಈ ಭೇದದ ಬಗ್ಗೆ ಪ್ರಶ್ನೆಯೇ ಏಳದು.



ಜೀವನಿಗೆ ಮೂರು ಅವಸ್ಥೆಗಳಿರುವುದು ಪ್ರಸಿದ್ಧ. ಕಣ್ಣು, ಕಿವಿ ಮುಂತಾದವುಗಳಿಂದ ರೂಪ, ಶಬ್ದ ಮುಂತಾದ ವಿಷಯಗಳನ್ನು ಅನುಭವಿಸುತ್ತ ಇರುವಾಗ **ಜಾಗ್ರದವಸ್ಥೆ** ಎನ್ನುತ್ತಾರೆ. ಈ ಇಂದ್ರಿಯಗಳೆಲ್ಲ ವಿರಮಿಸಿದ ಮೇಲೆ, ಜಾಗ್ರದವಸ್ಥೆಯ ಸಂಸ್ಕಾರದಿಂದಾಗಿ ಮನಸ್ಸು ತಾನೇ ನಾನಾ ಆಕಾರವನ್ನು ತಾಳುತ್ತದೆ. ಅದನ್ನು **ಸ್ವಪ್ನಾವಸ್ಥೆ** ಎನ್ನುತ್ತಾರೆ. ಜೀವನು ಆಗ ಸ್ವಪ್ನಾವಸ್ಥೆಯಲ್ಲಿದ್ದು ಸ್ವಪ್ನವನ್ನು ನೋಡುತ್ತಿರುತ್ತಾನೆ. ಅಲ್ಲಿಯೂ ಸುಖದುಃಖಗಳನ್ನನುಭವಿಸಿ ಬಳಲಿದ ಜೀವನು ಮೆಲ್ಲನೆ **ಸುಷುಪ್ತಾವಸ್ಥೆಗೆ** ತೆರಳುತ್ತಾನೆ. ಅಲ್ಲಿ ಮನಸ್ಸೂ ಲೀನವಾಗಿರುವುದರಿಂದ ಒಂದು ರೀತಿ ತಿಳಿದೂ ತಿಳಿಯದಿರುವಂಥ ಸುಖಾನುಭವ. ಈ ಮೂರು ಅವಸ್ಥೆಗಳಲ್ಲಿ ಆತ್ಮನ ನಿಜವಾದ ಅವಸ್ಥೆ ಯಾವುದು? ಯಾವುದೂ ಅಲ್ಲ ಎನ್ನಬೇಕು. ಆತ್ಮನು ಒಂದಾದ ಮೇಲೆ ಒಂದರಂತೆ ಮೂರು ಅವಸ್ಥೆಗಳನ್ನೂ ತಾಳುತ್ತಾನೆ. ಯಾವನು ಒಂದಾದ ಮೇಲೆ ಒಂದರಂತೆ ಮೂರು ಮನೆಗಳನ್ನೂ ಹೊಕ್ಕು ಹೊರಡುತ್ತಾನೋ ಅವನು ಆ ಮನೆಗಳಿಗಿಂತ ಬೇರೆಯಾದವನು ಎಂಬುದು



ಸ್ಪಷ್ಟ. ಅದೇ ರೀತಿ ಈ ಆತ್ಮನು ಈ ಮೂರು ಅವಸ್ಥೆಗಳಿಗಿಂತ ಬೇರೆಯಾದ ನಾಲ್ಕನೆಯವನು. ಅಂದರೆ ನಾಲ್ಕನೆಯ ಅವಸ್ಥೆಯವನು ಎಂದಲ್ಲ. ಇವೆಲ್ಲ ಅಜ್ಞಾನಾವಸ್ಥೆಗಳು. ಅವನು ಇವನ್ನು ಮೀರಿದವನು. ಅಜ್ಞಾನರಹಿತನು ಎಂದರ್ಥ.

ಇಲ್ಲಿ ಅದು ಎಂದರೆ ನಮ್ಮ ಆತ್ಮ, ನಮ್ಮೆಲ್ಲರ ಆತ್ಮ, ಪರಮಾತ್ಮ. ಅದನ್ನು ಬಿಟ್ಟು ಉಳಿದೆಲ್ಲ ದೃಶ್ಯ ಪ್ರಪಂಚವು ತುಚ್ಛವಾದುದು, ಸತ್ತ್ವಹೀನವಾದದ್ದು. ಅದು ಕೇವಲ ಹುಸಿತೋರಿಕೆ. ಆತ್ಮನು ವ್ಯಾಪಕನು ಎಂದು ಹಿಂದೆ ಹೇಳಿದೆ. ಹಾಗೆ ನೋಡಿದರೆ ಪ್ರಪಂಚದ ಯಾವುದೇ ವಸ್ತುವೂ ವ್ಯಾಪಕವಲ್ಲ. ಒಂದು ಕಡೆ ಇದ್ದರೆ ಮತ್ತೊಂದು ಕಡೆ ಇರುವುದಿಲ್ಲ. ಒಂದು ಕಾಲದಲ್ಲಿ ಇದ್ದರೆ ಇನ್ನೊಂದು ಕಾಲದಲ್ಲಿ ಇರುವುದಿಲ್ಲ. ಇಷ್ಟೇ ಅಲ್ಲ. ಕ್ಷಣಕ್ಷಣಕ್ಕೂ ವಸ್ತುಗಳಲ್ಲಿ ಪರಿವರ್ತನೆ ಆಗುತ್ತಲೇ ಇರುತ್ತದೆ. ಒಬ್ಬ ಮನುಷ್ಯನು ಬಾಲಕನಾಗಿದ್ದಾಗ ನೋಡಿ ಪುನಃ ಹತ್ತು ವರ್ಷ ಬಿಟ್ಟು ನೋಡಿದರೆ ಆತನಲ್ಲಿ ದೊಡ್ಡ ಬದಲಾವಣೆಯನ್ನು ಕಾಣುತ್ತೇವೆ. ಆದರೆ ಈ



ಬದಲಾವಣೆ ಆ ಹತ್ತು ವರ್ಷಗಳಲ್ಲಿ ಎಂದೋ ಒಂದು ದಿನ ಇದ್ದಕ್ಕಿದ್ದಂತೆ ನಡೆದದ್ದಲ್ಲ. ಬದಲಾವಣೆಯ ಪ್ರಕ್ರಿಯೆ ಕ್ಷಣಕ್ಷಣವೂ ನಡೆದಿದೆ. ಪದೇ ಪದೇ ಸ್ವಭಾವವನ್ನು ಬದಲಾಯಿಸುವವನನ್ನು ನಂಬಬಾರದು ಎನ್ನುತ್ತಾರೆ. ಅದೇ ರೀತಿ ಕ್ಷಣಕ್ಷಣಕ್ಕೂ ಬದಲಾವಣೆ ಹೊಂದುವ ಪ್ರಪಂಚವನ್ನು ನಾವು ನಂಬುವಂತಿಲ್ಲ. ಬದಲಾಗುವ ಪ್ರಪಂಚದಲ್ಲಿ ಆತ್ಮನೊಬ್ಬನೇ ಬದಲಾಗದವನು. ಅಸ್ಥಿರವಾದ ಪ್ರಪಂಚವನ್ನು ಬಿಟ್ಟು ಸ್ಥಿರವಾದ ಆತ್ಮನನ್ನೇ ನೆಚ್ಚಿಕೊಳ್ಳಬೇಕು.

ಎಲ್ಲ ವೇದಾಂತಗಳೂ ಜಗತ್ತಿನ ಮೂಲಕಾರಣವಾದ ಪರಬ್ರಹ್ಮವನ್ನು ತಿಳಿಸಲು ಹೊರಟಿವೆ. ಅಂಥ ಬ್ರಹ್ಮವನ್ನು ಇದು ಹೀಗೆ ಇದೆ ಎಂದು ನಾನು ಹೇಗೆ ಹೇಳಲಿ? ವಸ್ತುವಿಗೆ ಯಾವುದಾದರೊಂದು ಆಕಾರವಿದ್ದರೆ, ಗುಣವಿದ್ದರೆ ಅದರ ಹೋಲಿಕೆಯಿರುವ ಇನ್ನೊಂದು ವಸ್ತುವನ್ನು ನಾವು ನೋಡಿದ್ದರೆ ಅದನ್ನು ವರ್ಣಿಸಬಹುದಿತ್ತು. ಬ್ರಹ್ಮಕ್ಕೆ ಅಂಥದಾವುದೂ ಇಲ್ಲ. ಶ್ರುತಿಯೇ ಬಾಯಿಬಿಟ್ಟು ಹೇಳುತ್ತದೆ– 'ಮಾತು ಮತ್ತು

ಮನಸ್ಸುಗಳು ಬ್ರಹ್ಮವನ್ನು ಮುಟ್ಟದೇ ಹಿಂದಿರುಗುತ್ತವೆ' ಎಂದು. ಮಾತಿನಿಂದ ಅದನ್ನು ಬಣ್ಣಿಸಲಿಕ್ಕಾಗದು. ಇಷ್ಟೇ ಅಲ್ಲ. ಮನಸ್ಸಿನಿಂದ ಯೋಚಿಸಲಿಕ್ಕೂ ಆಗದು. ಹಾಗಿದ್ದರೆ ವೇದದಿಂದಲೇ ಬ್ರಹ್ಮವನ್ನು ತಿಳಿಯಬೇಕು ಎನ್ನುವುದೇತಕ್ಕೆ? ವೇದಗಳಾದರೂ ಬ್ರಹ್ಮವನ್ನು ಹೇಗೆ ತಿಳಿಸಿಕೊಡುತ್ತವೆ? ಎಂದರೆ 'ಅತದ್ವ್ಯಾವೃತ್ತಿರೂಪೇಣ' (ಇದಲ್ಲ ಇದಲ್ಲ ಎಂದು) ಎನ್ನಬೇಕು. 'ನಮ್ಮ ಇಂದ್ರಿಯ ಮನಸ್ಸುಗಳಿಂದ ನಾವು ಏನೇನೆಲ್ಲ ತಿಳಿದು-ಕೊಳ್ಳುತ್ತೇವೆಯೋ ಅದು ಬ್ರಹ್ಮವಲ್ಲ' ಎಂದು ಅವು ತಿಳಿಸುತ್ತವೆಯಲ್ಲದೆ 'ಇದು ಬ್ರಹ್ಮ' ಎಂದಲ್ಲ. 'ನಾವು ತಿಳಿಯುವ ವಸ್ತುವಾದರೂ ಬ್ರಹ್ಮವಲ್ಲವೆಂದಾದರೆ ಬ್ರಹ್ಮವೇ ಇಲ್ಲವೆಂದಾಯಿತಲ್ಲ?' ಹಾಗೇನಿಲ್ಲ. ನನ್ನಿಂದ ತಿಳಿಯಲ್ಪಡುವ ವಸ್ತುವನ್ನೆಲ್ಲ ಇದು ಬ್ರಹ್ಮವಲ್ಲ ಎಂದು ದೂರತಳ್ಳಬಹುದು. ಆದರೆ ಇದೆಲ್ಲವನ್ನೂ ತಿಳಿಯುವ, ದೂರತಳ್ಳುವ ನನ್ನನ್ನು ದೂರತಳ್ಳುವರು ಯಾರು? ಆ 'ನಾನು' ಉಳಿದೇ ಉಳಿಯುತ್ತಾನಲ್ಲ! ಅದೇ ಬ್ರಹ್ಮ.

**********